ಒ.ಎಸ್. ನಂ.79/2019
ಪಿಡಬ್ಲ್ಯು-1

ದಿನಾಂಕ 05.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟಿ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ</u>

ನಾನು 3ನೆ ತರಗತಿವರೆಗೆ ಶಾಲೆ ಕಲಿತಿರುತ್ತೇನೆ. 1ನೆ ಪ್ರತಿವಾದಿ ಮೃತಪಟ್ಟು 03-ವರ್ಷಗಳಾಗಿರುತ್ತವೆ. 1ನೆ ಪ್ರತಿವಾದಿ ಮತ್ತು ನನ್ನ ತಂದೆ ಸಹೋದರರು ಎಂದರೆ ಸರಿ. ದಾವಾಸ್ತಿ ಮೊದಲು ಶರಣಯ್ಯ ಎನ್ನುವವರ ಹೆಸರಿನಲ್ಲಿತ್ತು. ಮೂಲ ಮಾಲಿಕರು ಹೆಸರು ಶರಣ್ಣಾ ತಾಯಿ ತಿಪ್ಪವ್ವ ಇರುತ್ತದೆ ಎಂದರೆ ಸರಿ. ದಾವಾಸ್ತಿಯನ್ನು ಶರಣ್ಣಾ ತಾಯಿ ತಿಪ್ಪವ್ವರವರಿಂದ ನನ್ನ ಅಜ್ಜ ಭೀಮರಾಯ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ನನ್ನ ಅಜ್ಜ ದಾವಾಸ್ತಿಯನ್ನು ನನ್ನ ತಂದೆ ಸಂಗಪ್ಪ ಮತ್ತು 1ನೆ ಪ್ರತಿವಾದಿಯ ಹೆಸರಿನಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ದಾವಾಸ್ತಿಯನ್ನು ನನ್ನ ಅಜ್ಜನು ನನ್ನ ತಂದೆಯ ಹೆಸರಿನಲ್ಲಿ 07-ಎಕರೆ 02-ಗುಂಟೆ ಮತ್ತು 1ನೆ ಪ್ರತಿವಾದಿಯ ಹೆಸರಿನಲ್ಲಿ 07-ಎಕರೆ 02-ಗುಂಟೆ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸರ್ವೆ ನಂ.24 ರಲ್ಲಿ 14-ಎಕರೆ 04-ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ದಾವಾಸ್ತಿಯನ್ನು ನಾನು 07-ಎಕರೆ 02-ಗುಂಟೆಯಲ್ಲಿ ಸಾಗುವಳಿ ಮಾಡುತ್ತಿದ್ದೇನೆ ಮತ್ತು 1ನೆ ಪ್ರತಿವಾದಿಯ ಹೆಸರಿನಲ್ಲಿ 07-ಎಕರೆ 02-ಗುಂಟೆ ಜಮೀನಿನಲ್ಲಿ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಆದರೆ ಫಾರಂ ನಂ.10 ರಲ್ಲಿ ನನ್ನ ಹೆಸರಿಗೆ 08-ಎಕರೆ 05-ಗುಂಟೆ ನನ್ನ ಹೆಸರಿನಲ್ಲಿರುತ್ತದೆ ಎಂದು ಹೇಳುತ್ತಾರೆ. ನಾನು ಫಾರಂ ನಂ.10 ನ್ನು ಹಾಜರುಪಡಿಸಿರುವುದಿಲ್ಲ. ನಿಪಿ-6 ರಲ್ಲಿ 1964 ರಿಂದ ನನ್ನ ತಂದೆಯ ಹೆಸರಿಗೆ 07-ಎಕರೆ 02-ಗುಂಟೆ ಜಮೀನು ಬಂದಿರುತ್ತದೆ ಎಂದರೆ ಸರಿ. ಆದರೆ ನಡುವೆ ಬಾಂದಾರಿ ಹಾಕಿದ್ದು ಎಡ ಬಲ ಎಂದು ಪಾಲು ಆಗಿರುತ್ತದೆ ಎಂದು ಹೇಳುತ್ತಾರೆ. ನನ್ನ ತಂದೆ ತಮ್ಮ ಜೀವಿತಾವಧಿಯಲ್ಲಿ ಎಡ ಬಲ ಜಮೀನು ಹೆಚ್ಚು ಇರುವ ಬಗ್ಗೆ ದಾವೆ ಹಾಕಿಲ್ಲ ಎಂದರೆ ಸರಿ. 1964 ರಿಂದ 2007 ರವರೆಗೆ ನನ್ನ ತಂದೆಯ ಹೆಸರಿಗೆ 07-ಎಕರೆ 02-ಗುಂಟೆ ಜಮೀನು ಪಹಣಿಗಳಲ್ಲಿ ಬಂದಿರುತ್ತದೆ ಎಂದರೆ ಸರಿ. ಸದರಿ 07-ಎಕರೆ 02-ಗುಂಟೆ ಜಮೀನಿನಲ್ಲಿ 28-ಗುಂಟೆ ಪೋಟ ಖರಾಬ ಎಂದು ತೆಗೆದಿರುತ್ತಾರೆ ಎಂದರೆ ಸರಿ. ಪೋಟ ಖರಾಬ ಬಿಟ್ಟು 06-ಎಕರೆ 14-ಗುಂಟೆ ಜಮೀನು ಉಳಿದಿರುತ್ತದೆ ಎಂದರೆ ಸರಿ.

1ನೆ ಪ್ರತಿವಾದಿಯು 2 ರಿಂದ 4ನೆ ಪ್ರತಿವಾದಿಯರಿಗೆ ಪಾಲು ವಾಟ್ನಿ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲದೆ ಬರೆದುಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ಸದರಿ ಪಾಲು ಪತ್ರ ಬರೆದುಕೊಟ್ಟ ನಂತರ ಸರ್ವೆ ನಂ.24 ಸರ್ವೆ ಆಗಿರುತ್ತದೆ

ಎಂದರೆ ಸರಿಯಲ್ಲ. ಸದರಿ ಸರ್ವೆ ಆದ ನಂತರ ಫಾರ ನಂ.10 ಮಾಡಿರುತ್ತಾರೆ ಎಂದರೆ ಸಾಕ್ಷಿ ಜಮೀನನ್ನು ಸರ್ವೆ ಮಾಡದೆ ಕಚೇರಿಯಲ್ಲಿ ಕುಳಿತು ಮಾಡಿರುತ್ತಾರೆ ಎಂದು ಹೇಳುತ್ತಾರೆ. ಫಾರಂ ನಂ.10 ನ್ನು ಪ್ರಶ್ನಿಸಿ ಎಡಿ ಎಲ್ ಆರ್ ಮತ್ತು ಡಿಡಿಎಲ್ಆರ್ ರವರಲ್ಲಿ ಅಪೀಲು ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಅಪೀಲಿನಲ್ಲಿ ಏನು ಆದೇಶವಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಮಡಿವಾಳಪ್ಪ ಶಾಲೆ ಕಲಿತಿಲ್ಲ ಎಂದರೆ ನನಗೆ ಗೊತ್ತಿಲ್ಲ. ಖರೀದಿಯ ಪ್ರಕಾರ ದಾವಾಸ್ತಿ ಮುಟೇಷನ ಆಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಎಡ ಬಲ ಎಂದು ಹಂಚಿಕೊಂಡಿರುತ್ತೇವೆ ಎಂದು ಹೇಳುತ್ತಾರೆ. ಎಡ ಬಲ ಎಂದು ಹಂಚಿಕೆ ಮಾಡಿದ ಬಗ್ಗೆ ನಾನು ದಾಖಲೆಯನ್ನು ಹಾಜರುಪಡಿಸಿಲ್ಲ. ಸಾಕ್ಷಿ ಮುಂದುವರೆದು ನಾನು ಹೆಚ್ಚಿಗೆ ಆಗಿ ಸ್ವಾಧೀನ ಹೊಂದಿರುತ್ತೇನೆ ಎಂದು ಹೇಳುತ್ತಾರೆ. ಈ ಕುರಿತು ನಾನು ಯಾವುದೆ ದಾವೆ ಹಾಕಿಲ್ಲ. ದಾವಾಸ್ತಿಯಲ್ಲಿ ಯಾವ ಮಣ್ಣಿನ ನಮೂನೆ ಇದೆ ಎಂದರೆ ಸಾಕ್ಷಿ ಸವಳು ಮಣ್ಣು ಇದ್ದು ಪ್ರಸ್ತುತವಾಗಿ ಮಣ್ಣು ಸರಿಯಾಗಿರುತ್ತದೆ ಎಂದು ಹೇಳುತ್ತಾರೆ. ಸರ್ವೆ ನಂ.24 ರ ಪಹಣಿಯಲ್ಲಿ ಮರಡಿ ಮಣ್ಣು ಎಂದು ಬರೆದಿರುತ್ತದೆ ಎಂದರೆ ಸಾಕ್ಷಿ ಪ್ರತಿವಾದಿಯರ ಆಸ್ತಿ ಮಣ್ಣು ಚೆನ್ನಾಗಿರುತ್ತದೆ ಎಂದು ಹೇಳುತ್ತಾರೆ. ನಾನು ನನ್ನ ಜಮೀನಿನ ಮಣ್ಣು ಸರಿಯಾಗಿಲ್ಲ ಎಂದು ಮಣ್ಣು ಪರೀಕ್ಷೆ ಮಾಡಿದ ವರದಿಯನ್ನು ಸಲ್ಲಿಸಿಲ್ಲ. ನಾನು ಬೆಳೆ ಬೆಳದ ಬಗ್ಗೆ ಯಾವುದೆ ದಾಖಲೆಗಳನ್ನು ಹಾಜರುಪಡಿಸಿಲ್ಲ.

ನಾನು ದಾವಾಸ್ತಿಯನ್ನು ಪಿತ್ರಾರ್ಜಿತ ಆಸ್ತಿ ಎಂದು ಈ ದಾವೆ ಬರೆಯಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ದಾವೆಯನ್ನು ಬರೆಯಲು ವಕೀಲರಿಗೆ ನಾನೆ ಮಾಹಿತಿ ನೀಡಿರುತ್ತೇನೆ. ನಾನಾಗಲಿ ನನ್ನ ತಂದೆಯಾಗಲಿ ಪಾಲು ಕೋರಿ ಯಾವುದೆ ಪಾಲು ಸಲ್ಲಿಸಿಲ್ಲ ಎಂದರೆ ಸರಿ. ಪ್ರತಿವಾದಿಯರು ವಾಟ್ನಿಯಾದ ನಂತರ ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಮೊದಲು ಯಾವುದೆ ಒಡ್ಡು ಇರಲಿಲ್ಲ ನಾನೆ ಒಡ್ಡನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆಯನ್ನು ಸಲ್ಲಿಸುವ ಸಲುವಾಗಿ ಒಡ್ಡು ಹಾಕಿ ಪೊಟೊ ತೆಗೆದು ಈ ದಾವೆಯಲ್ಲಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆ ತಮ್ಮ ಜೀವಿತಾವಧಿಯಲ್ಲಿ 08-ಎಕರೆ 04-ಗುಂಟೆ ಜಮೀನಿನಲ್ಲಿ ಸ್ವಾಧಿನತೆ ಹೊಂದಿದ್ದರು ಎಂಬ ಬಗ್ಗೆ ದಾವೆ ಸಲ್ಲಸಿಲ್ಲ. ನನ್ನ ತಂದೆ 2007 ರಲ್ಲಿ 07-ಎಕರೆ ಜಮೀನು ನನ್ನ ಹೆಸರಿಗೆ ಮಾಡಿ 02-ಗುಂಟೆ ಜಮೀನು ತಮ್ಮ ಹೆಸರಿಗೆ ಇಟ್ಟುಕೊಂಡಿರುತ್ತಾರೆ ಸರಿ. ದಾವಾಸ್ತಿ ನನ್ನ ಹೆಸರಿಗೆ ಆದ ಮೇಲೆ 2019 ರವರಿಗೆ ನಾನು ಯಾವುದೆ ದಾವೆ ಹಾಕಿಲ್ಲ ಎಂದರೆ ಸರಿ.

ನಾನು 08-ಎಕರೆ 04-ಗುಂಟೆ ಮಾಲಿಕ ಹಾಗೂ ಕಬ್ಜೆದಾರನಲ್ಲ ಎಂದರೆ ಸರಿಯಲ್ಲ. ದಿನಾಂಕ 20.07.2024 ರಂದು ಒಡ್ಡನ್ನು ಹಾಕಿ ಪೊಟೊ ತೆಗೆದು ಈ ದಾವೆಯಲ್ಲಿ

ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಾನು ದಾವೆ ದಾಖಲಿಸುವ ಸಮಯದಲ್ಲಿ ಒಡ್ಡು ಇದ್ದಿದ್ದರೆ ನಾನು ನಾನು ಅದರ ಭಾವಚಿತ್ರಗಳನ್ನು ಸಲ್ಲಿಸುತ್ತಿದ್ದೆ ಎಂದರೆ ಸರಿಯಲ್ಲ. JDLR ರವರ ಮೆಲ್ಮಮನವಿಯಲ್ಲಿ ಈ ದಾವೆಯನ್ನು ಹಾಕಿದ್ದರಿಂದ ನ್ಯಾಯಾಲಯದಲ್ಲಿ ವ್ಯಾಜ್ಯ ಬಗೆಹರಿಸಿಕೊಳ್ಳಿ ಎಂದು ಆದೇಶವಾಗಿರುತ್ತದೆ ಎಂದರೆ ಸರಿ.

ಪ್ರತಿವಾದಿ ಪರ ವಕೀಲರು ಮುಂದುವರೆದ ಮುಂದುವರೆ ಪಾಟಿ ಸವಾಲಿಗೆ ಕಾಲಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ